# ಪುಣ್ಯ ಸಿಕ್ಕಿದ್ದು ನನ್ನ ಪುಣ್ಯ



**ಸನಾತನಿ**
**ಸ್ಟಾರ್ ಸುವರ್ಣದ 'ಯಜಮಾನಿ'ಯ ಪುಣ್ಯ**

◆ **ನಿಮ್ಮ ಪರಿಚಯವನ್ನು ಮಾಡಿಕೊಡಿ.**

ನಮ್ಮ ಊರು ಹುಬ್ಬಳ್ಳಿ. ನಾನು ಭರತನಾಟ್ಯ ಕಲಾವಿದೆ. ಡಾನ್ಸ್‌ನಲ್ಲಿಯೇ ಗುರುತಿಸಿಕೊಳ್ಳಬೇಕು. ಅದರಲ್ಲಿಯೇ ಏನಾದರೂ ಮಾಡಬೇಕು ಎನ್ನುವ ಬಯಕೆ ನನ್ನದಾಗಿತ್ತು. ಆದರೆ ಅಮ್ಮನಿಗೆ ನಾನು ನಟಿಯಾದರೆ ಚೆನ್ನಾಗಿರುತ್ತದೆ ಎಂದೆನಿಸಿದ್ದರ ಪರಿಣಾಮ ಸಿನಿಮಾ– ಕಿರುತೆರೆಯಲ್ಲಿ ನಟಿಯಾಗುವಂತೆ ಆಯಿತು. ಮೊದಲು ನಾನು ಸಿನಿಮಾಕ್ಕೆ ಬಣ್ಣವನ್ನು ಹಚ್ಚಿದೆ. ಈಗ ಸಿನಿಮಾ–ಧಾರಾವಾಹಿ ಎರಡರಲ್ಲೂ ಮಾಡುತ್ತಿದ್ದೇನೆ. ಇದು ನನ್ನ ಎರಡನೆಯ ಮೆಗಾ ಸೀರಿಯಲ್. 'ಗೃಹಲಕ್ಷ್ಮಿ' ಮೊದಲ ಧಾರಾವಾಹಿ. ನಾಟ್ಯ ಕಲಿತಿದ್ದರಿಂದ ಅಭಿನಯ ಸುಲಭವಾಯಿತು. ಅವಕಾಶಗಳೂ ಒಂದಾದ ಮೇಲೆ ಒಂದರಂತೆ ಸಿಗುತ್ತಿವೆ.

◆ **ಬಣ್ಣದ ಬದುಕಿನ ಆರಂಭದ ದಿನಗಳು ಹೇಗಿದ್ದವು?**

ನಟಿಯಾಗುವ ಕಲ್ಪನೆ ನನಗೆ ಇರಲಿಲ್ಲ. ಅವಕಾಶಗಳು ಒಂದಾದ ಮೇಲೆ ಒಂದು ದೊರೆತು ನಟಿಯಾದೆ. ಒಳ್ಳೆಯ ಅವಕಾಶಗಳು ಸಿಕ್ಕವು ನಟಿಯಾದೆ. ಆರಂಭದಲ್ಲಿ 'ಬಾ ನನ್ನ ಪ್ರೀತಿಸು' ಸಿನಿಮಾ ನನಗೆ ಆಕಸ್ಮಿಕವಾಗಿ ಒಲಿದು ಬಂತು. ಬೇರೆ ನಟಿಯೊಬ್ಬರ ಹುಡುಕಾಟದಲ್ಲಿ ಇದ್ದ ಚಿತ್ರ ತಂಡಕ್ಕೆ ನಾನು ಸೂಕ್ತ ಆಗ್ತೀನಿ ಎಂದು ಅನ್ನಿಸಿದೆ. ಹಾಗೆಂದೇ ನನ್ನನ್ನು ಕೇಳಿದರು. ನನಗೂ ಒಪ್ಪಿಗೆ ಆಯ್ತು. ಮೊದಲು ನನ್ನ ತಾಯಿಗೆ ಅಷ್ಟು ಇಷ್ಟ ಇರಲಿಲ್ಲ. ನಂತರ ಅವರು ನೀನು ನಟಿಯಾಗುವುದೇ ಸೂಕ್ತ ಎಂದು ಪ್ರೋತ್ಸಾಹಿಸಿದರು. ಅವರಿಗೆ ನನ್ನ ವೃತ್ತಿ ಬದುಕಿನ ಬಗ್ಗೆ ಸ್ಪಷ್ಟ ಚಿತ್ರಣ ಅಂದೇ ಸಿಕ್ಕಿದೆ. ನಾನು ಡಾನ್ಸರ್ ಆಗಿದ್ದರೆ ಯಾವ ಮಟ್ಟಿಗೆ ಬೆಳೆಯುತ್ತಿದ್ದೇನೋ ಗೊತ್ತಿಲ್ಲ. ಅಭಿನಯ ರಂಗ ಪ್ರವೇಶಿಸಿದ್ದರೂ ಈಗ ಖುಷಿಯಾಗಿಯೇ ಇದ್ದೇನೆ. ನಮ್ಮ ಕುಟುಂಬದವರು ತೆಗೆದುಕೊಂಡ ತೀರ್ಮಾನ ಸೂಕ್ತವಾಗಿದೆ ಎಂದು ಅನ್ನಿಸುತ್ತದೆ.

◆ **ಬಾಲ್ಯದಲ್ಲಿ ಎಂಜಿನಿಯರ್– ಡಾಕ್ಟರ್ ಆಗಬೇಕು ಎಂದು ಅಂದುಕೊಂಡಿದ್ರಾ?**

ಪೊಲೀಸ್ ಆಗಬೇಕು ಎಂದು ಆಸೆ ಇತ್ತು. ಪೊಲೀಸ್‌ರ ಹತ್ತಿರ ಲಾಠಿ ಇರುವುದರಿಂದ ಮಕ್ಕಳು ಭಯಪಡುತ್ತಾರೆ. ಕೆಲ ಪೋಷಕರೂ ಪೊಲೀಸರಿಗೆ ಹಿಡಿದುಕೊಡುತ್ತೇನೆ ಎಂದು ತಮ್ಮ ಮಕ್ಕಳಿಗೆ ಹೆದರಿಸುತ್ತಾರೆ. ಅಂತಹದನ್ನು ಕಂಡ ನಾನು ಪೊಲೀಸ್ ತುಂಬ ಗತ್ತಿನ ಕೆಲಸ ಎಂದುಕೊಂಡು ಪೊಲೀಸ್ ಆಗಬೇಕು ಎಂದು ಹೇಳುತ್ತಿದ್ದೆ. ಆದರೆ, ಶಿಕ್ಷಣಕ್ಕಿಂತ ಕಲೆಯ ಮೋಹ ಹೆಚ್ಚಿತ್ತು. ಅದಕ್ಕಾಗಿಯೇ ನಾನು ನಾಟ್ಯವನ್ನು ಆಯ್ಕೆ ಮಾಡಿಕೊಂಡಿದ್ದೆ. ಎಂಜಿನಿಯರ್–ಡಾಕ್ಟರ್ ಆಗುವುದಾಗಿ ಭಾವಿಸಲೇ ಇಲ್ಲ. ಹುಬ್ಬಳ್ಳಿಯಲ್ಲಿ ನಾವು ಇದ್ದಾಗ ಹಬ್ಬ ಹರಿದಿನಗಳಲ್ಲಿ ಜರುಗುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನಾನು ಸಕ್ರಿಯವಾಗಿ ಭಾಗವಹಿಸುತ್ತಿದ್ದೆ. ಅವೆಲ್ಲ ನನ್ನ ವೃತ್ತಿ ಜೀವನಕ್ಕೆ ಪ್ರೇರಣೆಯಾಗಿದೆ.

◆ **ನಿಮಗೆ ಎಂತಹ ಪಾತ್ರಗಳು ಇಷ್ಟ?**

ನನಗೆ ಮಾನಸಿಕ ಸಮಸ್ಯೆಗಳನ್ನು ಪ್ರತಿನಿಧಿಸುವ ಪಾತ್ರಕ್ಕೆ ಜೀವ ತುಂಬಬೇಕು ಎನ್ನುವದು ಆಸೆ ಇದೆ. ಮಾನಸಿಕ ಸಮಸ್ಯೆ ಎಂದರೆ ಅಸ್ವಸ್ಥತೆ ಎಂದು ಅಲ್ಲ. ಸಾಮಾನ್ಯ ಮನುಷ್ಯರಂತೆಯೇ ಆರೋಗ್ಯವಂತರಂತೆ ಕಾಣಿಸುವವರೂ ಒಮ್ಮಿಂದೊಮ್ಮೆಲೆ ತಮ್ಮ ಮನೋ ನಿಗ್ರಹವನ್ನು ಕಳೆದುಕೊಂಡಂತೆ ವರ್ತಿಸುವ ಪಾತ್ರ ಮಾಡಬೇಕು. ಅಂತಹ ಪಾತ್ರ ನೈಜತೆಯ ಜೊತೆಗೆ ಭಿನ್ನವಾದ ಸವಾಲನ್ನು ಒಡ್ಡುತ್ತವೆ. ನಾವು ದಾವಣಗೆರೆಯಲ್ಲಿ ಇದ್ದಾಗ ಒಂದು ಆಶ್ರಮಕ್ಕೆ ಹೋಗ್ತಾ ಇದ್ದೆ. ಅದು ವಿಶೇಷ ಮಕ್ಕಳ ಆಶ್ರಮ. ಅಲ್ಲಿ ಕೆಲವರನ್ನು ಸೂಕ್ಷ್ಮವಾಗಿ ನೋಡುತ್ತಿದ್ದೆ. ಅಂತಹ ಸಮಸ್ಯೆಗಳಿಗೆ ಮೂರ್ತರೂಪ ಕೊಡಬೇಕು ಎಂದು ಅನ್ನಿಸಿತು. ನಿಜಕ್ಕೂ ಅದು ಕಷ್ಟದ ಕೆಲಸ ಕೂಡ ಹೌದು. ಅಂತಹ ಪಾತ್ರಗಳನ್ನೂ ಎದುರು ನೋಡುತ್ತಿದ್ದೇನೆ. ಅದನ್ನು ಬಿಟ್ಟು ಬಬ್ಲಿ ಪಾತ್ರವೂ ಇಷ್ಟ. ಇನ್ನೂ ಕೆಲವರು ನನ್ನನ್ನೇ ಮೈಮರೆತು ಅಭಿನಯದಲ್ಲಿ ಸಂಪೂರ್ಣ ತೊಡಗುವ ಪಾತ್ರಗಳು ನನಗೆ ಸೂಕ್ತ ಆಗುತ್ತವೆ ಎಂದಿದ್ದಾರೆ. ಹಾಗಾಗಿ ಅಂತಹ ಅಭೂತಪೂರ್ವ ಪಾತ್ರಗಳನ್ನೂ ನಿರ್ವಹಿಸುವ ಆಸೆಯಿದೆ. ಎಲ್ಲದಕ್ಕಿಂತ ಹೆಚ್ಚಾಗಿ ಒಬ್ಬ ಕಲಾವಿದೆಯಾಗಿ ಎಲ್ಲ ಗುಣವಿಶೇಷಗಳನ್ನೂ ಪ್ರತಿನಿಧಿಸಬೇಕು.

◆ **ಪುಣ್ಯಳ ಬಗ್ಗೆ ಹೇಳುವುದಾದರೆ**

ಪುಣ್ಯ ನಿಜಕ್ಕೂ ಚೆಂದದ ಪಾತ್ರ, ಅದು ನನಗೆ ಒಲಿದು ಬಂದಿದ್ದೂ ನನ್ನ ಪುಣ್ಯ. 'ಗೃಹಲಕ್ಷ್ಮಿ'ಯಲ್ಲಿ ಆದಿಲಕ್ಷ್ಮಿ ಆಗಿದ್ದೆ. ಆ ಪಾತ್ರದಲ್ಲಿ ತುಂಬ ಖುಷಿಯನ್ನು ಕಂಡುಕೊಂಡಿದ್ದೆ. ಈಗ ಪುಣ್ಯ ಪಾತ್ರವನ್ನು ಮಾಡುತ್ತಿದ್ದೇನೆ. ಮಾತ್ರವಲ್ಲದೆ ಅದನ್ನು ವೀಕ್ಷಕಳಾಗಿಯೂ ನೋಡುತ್ತಿದ್ದೇನೆ. ಇದು ಜನರ ಮನಸ್ಸಿಗೆ ಹತ್ತಿರವಾಗುವ ಪಾತ್ರ ಅನ್ನಿಸಿದೆ. ಆಕೆ ಆದರ್ಶ ಗುಣಗಳ ಗಣಿ ಇದ್ದಂತೆ. ಶಾಂತ ಮೂರ್ತಿ, ಎಲ್ಲರನ್ನೂ ಸರಿ ಸಮನಾಗಿ ನೋಡುವ ತಾಯಿ ಗುಣ ಆಕೆಗಿದೆ. ಕುಟುಂಬ, ತನ್ನ ಮನೆಯ ಒಳಿತಿಗಾಗಿ ಯಾವ ತ್ಯಾಗವನ್ನಾದರೂ ಮಾಡುತ್ತಾಳೆ. ಸ್ವಾಭಿಮಾನದ ಪ್ರತಿರೂಪದಂತೆ ಇದ್ದಾಳೆ. ಸಮಾಜದ ಆಗುಹೋಗುಗಳನ್ನು ಅರಿತು ಲೋಕ ವ್ಯವಹಾರವನ್ನು ನಡೆಸಿಕೊಂಡು ಹೋಗುವ ಅವಳ ಸಾಮರ್ಥ್ಯ ಮೆಚ್ಚುವಂತಹದ್ದು. ಆಕೆ ತುಂಬ ಸರಳ ಅನ್ನಿಸಿದರೂ, ಅಷ್ಟೇ ಸಂಕೀರ್ಣ ಗುಣವನ್ನು ಆಕೆ ಹೊಂದಿದ್ದಾಳೆ. 'ಮೂರು ಕಾಸಿನ ಕುದುರೆ' ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಇನ್ನೇನು ಐದು ದಿನಗಳ ಚಿತ್ರೀಕರಣ ಬಾಕಿ ಇದೆ. ಅದರಲ್ಲಿ ಪುಣ್ಯಳಿಗೆ ತದ್ವಿರುದ್ಧವಾದ ಪಾತ್ರವನ್ನು ಮಾಡುತ್ತಿದ್ದೇನೆ.

■ **ರಾಘವೇಂದ್ರ ಕೆ.**